

ಹೇಳಿದ್ದಾರೆ. ಈ ದರ್ಶನಕ್ಕಾಗಿ ಕೊಲಿನ್ ಅವರಿಗೆ 1.3 ದಶಲಕ್ಷ ಡಾಲರ್ ಮೊತ್ತದ 'ಟೆಂಪಲ್ಟನ್ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು. (ಧರ್ಮ, ದೇವರು, ಆಧ್ಯಾತ್ಮಿಕತೆ ಮತ್ತು ವಿಜ್ಞಾನಗಳಲ್ಲಿ ಸಾಮರಸ್ಯ ತರಲು ಶ್ರಮಿಸಿದವರಿಗೆ 1972ರಿಂದ ನೀಡುತ್ತಿರುವ ಪ್ರಶಸ್ತಿ).

2007ರ ನೊಬೆಲ್ ಪುರಸ್ಕೃತ ರಸಾಯನ ವಿಜ್ಞಾನಿ ಗೆರಾಲ್ಡ್ ಹರ್ಟಲ್ ಒಂದು ಸಂದರ್ಶನದಲ್ಲಿ ಹೀಗೆ ಹೇಳಿದ್ದಾರೆ: 'ನಿಸರ್ಗವು ದೇವರ ಪ್ರತಿರೂಪ. ನಾನು ಯಾವಾಗಲೂ ಬೈಬಲ್ಲನ್ನು ಓದಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುತ್ತೇನೆ. ಜೀವನವೇ ಒಂದು ದೊಡ್ಡ ಪವಾಡ. ದೇವರು ವ್ಯಕ್ತಿಯಲ್ಲ, ವಸ್ತುವಲ್ಲ, ಗಂಡಲ್ಲ, ಹೆಣ್ಣಲ್ಲ. ಅದೊಂದು ವಿವರಣಾತೀತವಾದ ಶಕ್ತಿ' ಎಂದಿದ್ದಾನೆ.

ಕಾರ್ಲ್ಸ್ ಸೇಗನ್ ಎಂಬ ವಿಜ್ಞಾನಿಯ ಬೆಸ್ಟ್ ಸೆಲ್ಲರ್ ಬುಕ್ 'ದಿ ಕಾಸ್ಮಿಕ್ ಡಾನ್ಸ್ ಆಫ್ ಶಿವಾ' ಕೃತಿಯಲ್ಲಿ – ಬ್ರಹ್ಮ, ವಿಷ್ಣು, ಮಹೇಶ್ವರರ ಅಸ್ತಿತ್ವದ ಬಗ್ಗೆ ಉಲ್ಲೇಖವಿದೆ. ಅಮೆರಿಕದಲ್ಲಿ ಪ್ರಾಯೋಗಿಕವಾಗಿ ನಡೆಸಿದ ಮೊದಲ ಅಣು ಬಾಂಬ್ ಪರೀಕ್ಷೆಯ ನಂತರ ಜೆ. ರಾಬರ್ಟ್ ಒಪನ್ ಮೇರ್ ಎಂಬ ವಿಜ್ಞಾನಿ, ಭಗವದ್ಗೀತೆಯ ಶ್ಲೋಕಗಳನ್ನು ಪಠಿಸಿದ್ದರಂತೆ.

ಭೌತ, ರಸಾಯನ, ಜೀವ ವಿಜ್ಞಾನ – ಈ ಮೂರೂ ಶಾಖೆಗಳ ಪ್ರಸಿದ್ಧ ವ್ಯಕ್ತಿಗಳು ಧರ್ಮ ಮತ್ತು ದೇವರು ಇವುಗಳ ನಡುವಿನ ಸೂಕ್ಷ್ಮ ವ್ಯತ್ಯಾಸವನ್ನು ತಿಳಿದಿದ್ದರು. ಯಾರೂ ಕೂಡ ಧಾರ್ಮಿಕತೆಯನ್ನು ಬೆಂಬಲಿಸಲಿಲ್ಲ.

ದೇವರು ಮತ್ತು ಅಧ್ಯಾತ್ಮವನ್ನು ಸಂಪೂರ್ಣವಾಗಿ ನಿರಾಕರಿಸುವ ವಿಜ್ಞಾನಿಗಳೂ ಇದ್ದಾರೆ. ನೊಬೆಲ್ ಪ್ರಶಸ್ತಿ ಸ್ಥಾಪಿಸಿದ ವಿಜ್ಞಾನಿ ಆಲ್‌ಫ್ರೆಡ್ ನೊಬೆಲ್ ನಾಸ್ತಿಕನಾಗಿದ್ದ. ನ್ಯೂಟನ್ ಮತ್ತು ಸ್ಟೀಫನ್ ಹಾಕಿಂಗ್ಸ್ ಇಬ್ಬರೂ



> ನಿಸರ್ಗದ ನಿಯಮಗಳಲ್ಲಿ ಪವಾಡಗಳು ಮತ್ತು ಅಪವಾದಗಳು ಇಲ್ಲ. ಬಿಗ್ ಬ್ಯಾಂಗ್‌ನಿಂದಾಗಿ ಬ್ರಹ್ಮಾಂಡ ಸೃಷ್ಟಿಯಾಗಿದೆ. ಇದರಲ್ಲಿ ದೇವರ ಕೈವಾಡ ಇಲ್ಲ.
>
> **-ಸ್ಟೀಫನ್ ಹಾಕಿಂಗ್ಸ್**

ಗುರುತ್ವಾಕರ್ಷಣೆಯ ಸಿದ್ಧಾಂತಗಳನ್ನು ರೂಪಿಸಿದವರು. ಆಸ್ತಿಕನಾಗಿದ್ದ ನ್ಯೂಟನ್ ಗುರುತ್ವ ನಿಯಮಗಳನ್ನು ಆವಿಷ್ಕರಿಸಿದರೆ, ನಾಸ್ತಿಕನಾಗಿದ್ದ ಹಾಕಿಂಗ್ಸ್ ಕಪ್ಪುಕುಳಿಗಳ ಗುರುತ್ವದ ಬಗ್ಗೆ ಅಧ್ಯಯನ ಮಾಡಿದರು. 'ನಿಸರ್ಗದ ನಿಯಮಗಳಲ್ಲಿ ಪವಾಡಗಳು ಮತ್ತು ಅಪವಾದಗಳು ಇಲ್ಲ. ಬಿಗ್ ಬ್ಯಾಂಗ್‌ನಿಂದಾಗಿ ಬ್ರಹ್ಮಾಂಡ ಸೃಷ್ಟಿಯಾಗಿದೆ. ಇದರಲ್ಲಿ ದೇವರ ಕೈವಾಡ ಇಲ್ಲ' ಎನ್ನುವುದು ಸ್ಟೀಫನ್ ನಂಬಿಕೆ.

ಬೈಬಲ್ (ಕ್ರೈಸ್ತ), ತೊರಾಹ (ಯಹೂದ್ಯ), ಕುರಾನ್ (ಮುಸ್ಲಿಮ್), ಭಗವದ್ಗೀತೆ (ಹಿಂದೂ) ಧರ್ಮ ಗ್ರಂಥಗಳು, ನೀತಿ ಕತೆಗಳು, ದೃಷ್ಟಾಂತಗಳನ್ನು ಒಳಗೊಂಡ ಪುಸ್ತಕಗಳಾಗಿದ್ದು, ಒಂದು ಉತ್ತಮ ಜೀವನವನ್ನು ರೂಢಿಸಿಕೊಳ್ಳಲು ಬೇಕಾದ ನೈತಿಕತೆಯನ್ನು ಬೋಧಿಸುತ್ತವೆಯೇ ಹೊರತು ದೈವತ್ವವನ್ನಲ್ಲ. ಕೇವಲ 7 ದಿನಗಳಲ್ಲಿ ಸೃಷ್ಟಿಕರ್ತನು ಜಗತ್ತನ್ನು ಸೃಷ್ಟಿಸಿದನು. ತನ್ನ ಪ್ರತಿಬಿಂಬದಿಂದ ಗಂಡನ್ನು, ಅವನ ಪಕ್ಕೆಲುಬಿನಿಂದ ಹೆಣ್ಣನ್ನು, ನಂತರ ಪ್ರಾಣಿ ಪಕ್ಷಿಗಳನ್ನು ಸೃಷ್ಟಿಸಿದನು ಎಂಬುದೆಲ್ಲ ಧರ್ಮ ಗ್ರಂಥಗಳಲ್ಲಿ ಇರುವ ಕಟ್ಟುಕಥೆಗಳು ಎಂಬುದು ಕೆಲವು ವಿಜ್ಞಾನಿಗಳ ವಾದ.

ನಾಸ್ತಿಕರು ಆಸ್ತಿಕತೆಗೆ ಕೆಲವೊಂದು ಕಾರಣಗಳನ್ನು ನೀಡುತ್ತಾರೆ. ಮುಖ್ಯವಾಗಿ ನಮ್ಮ ಮೆದುಳು. ಮೆದುಳಿನ ಮುಂಭಾಗ (prefrontal cortex) ವೈಚಾರಿಕತೆಗೆ ಸಂಬಂಧಿಸಿದ್ದರೆ, ಹಿಂಭಾಗ ಭಯವನ್ನು ಉತ್ಪತ್ತಿ ಮಾಡುತ್ತದೆ. ಯಾವಾಗ ಹಿಂಭಾಗ ಮೇಲುಗೈ ಸಾಧಿಸುತ್ತದೆಯೋ, ಅಂದರೆ ಮನುಷ್ಯನಿಗೆ ಯಾವಾಗ ಭಯ (ಸಾವು, ರೋಗ, ಖಿನ್ನತೆ) ಹುಟ್ಟಿಕೊಳ್ಳುತ್ತದೆಯೋ ಆಗ ಅವನು ದೇವರ ಮೇಲೆ ನಂಬಿಕೆ ಬೆಳೆಸಿಕೊಳ್ಳುತ್ತಾನೆ ಎಂಬುದು ಅವರ ಅಭಿಪ್ರಾಯ. 'ಸಂಕಟ ಬಂದಾಗ ವೆಂಕಟರಮಣ' ಎಂಬ ಗಾದೆ ಹೀಗೇ ಹುಟ್ಟಿಕೊಂಡಿರಬೇಕು. ವಿಜ್ಞಾನಿಗಳು ನೀಡುವ ಇನ್ನೊಂದು ಕಾರಣವೆಂದರೆ – ಹುಟ್ಟಿದಾರಭ್ಯ ಶಾಲೆ, ಕಾಲೇಜು, ವೃತ್ತಿ, ಕುಟುಂಬ, ಸಮಾಜ ಎಲ್ಲೆಲ್ಲೂ ಸಾರ್ವತ್ರಿಕವಾಗಿ ಒಪ್ಪಿತಗೊಂಡಿರುವ ಮತ್ತು ಆಚರಣೆಗೊಳ್ಳುವ ಮೂರ್ತಿ ಪೂಜೆ.

ದೇವರು ಇದ್ದಾನೆ ಅಥವಾ ಇಲ್ಲ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಸಾಕ್ಷಿಗಳು ಇಲ್ಲ. ಅಣುರೇಣು ತೃಣ ಕಾಷ್ಠಗಳಲ್ಲಿಯೂ (ಭಕ್ತ ಪ್ರಹ್ಲಾದನ ಹಾಗೆ) ದೇವರಿದ್ದಾನೆ ಎಂದು ನಂಬುವವರೂ ಇದ್ದಾರೆ. ಎಲ್ಲದಕ್ಕೂ ವಿಜ್ಞಾನದಲ್ಲಿ ಉತ್ತರವಿದೆ, ಮನುಷ್ಯನ ಬುದ್ಧಿಶಕ್ತಿಯೇ ಸುಪ್ರೀಂ ಪವರ್ ಎಂಬುವವರೂ ಇದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in